**ಚುಟುಕು ಕ್ರಿಕೆಟ್ ಹಬ್ಬದಮತ್ತೊಂದು ಆವೃತ್ತಿ ಮುಗಿದಿದೆ. ಐಪಿಎಲ್ ಕ್ರಿಕೆಟ್ ತನ್ನ ವಾಣಿಜ್ಯೀಕರಣ, ಮನರಂಜನೆಯ ಹೊರತಾಗಿಯೂ ಯುವ ಕ್ರಿಕೆಟಿಗರ ಕೌಶಲಕ್ಕೆ ಸಾಣೆ ಒಡ್ಡುತ್ತಿರುವುದು ಗಮನಾರ್ಹ. ಆಟದ ಶೈಲಿಯ ಸ್ಥಿತ್ಯಂತರಗಳ ವಿಶ್ಲೇಷಣೆಯಲ್ಲಿ ಪ್ರಶ್ನೆಗಳು ಸಹಜವಾಗಿಯೇ ಇವೆ. ಹೀಗಿದ್ದೂ, ಚುಟುಕು ಕ್ರಿಕೆಟ್‌ನಲ್ಲಿ ಸಕಾರಾತ್ಮಕ ಅಂಶಗಳು ಹೆಚ್ಚಾಗುತ್ತಿರುವುದನ್ನು ಅಲ್ಲಗಳೆಯಲಾಗದು.**

ಐಪಿಎಲ್‌ನ ತಕ್ಕಡಿ ವಿಪರೀತ ಮೇಲೇರುತ್ತದೆ. ಪ್ರಾರಂಭದಿಂದ ಹದಿಮೂರನೇ ಆವೃತ್ತಿಯವರೆಗೆ ಐಪಿಎಲ್‌ನ ವಹಿವಾಟು ಪ್ರಗತಿ ಶೇ 1600 ಎಂಬ ಒಂದು ಅಂದಾಜಿದೆ. ಮೊದಲ ಆವೃತ್ತಿಯಲ್ಲಿ ₹111 ಕೋಟಿಯಷ್ಟಿದ್ದ ಜಾಹೀರಾತು ಆದಾಯ 2018–2022ರ ಅವಧಿಯಲ್ಲಿ ಸರಾಸರಿ ₹618 ಕೋಟಿ ಎಂಬ ಇನ್ನೊಂದು ಗಣಿತವಿದೆ.

ಅತಿಯಾದ ವಾಣಿಜ್ಯೀಕರಣವು ಆಟದ ಕೌಶಲವನ್ನು ಕೆಡಿಸುತ್ತದೆ ಎಂದು ಕಾಪಿಬುಕ್ ಶಾಟ್ ಪ್ರೇಮಿಗಳು ಟೀಕಿಸುವುದು ಕೆಲವರಿಗೆ ಹಲುಬುವಿಕೆಯಂತೆ ಕಾಣುವುದೂ ಸಹಜವೇ. ಅಚ್ಚರಿಯೆಂದರೆ, 2015ರಲ್ಲೇ ವೆಸ್ಟ್‌ಇಂಡೀಸ್‌ನ ಕ್ರಿಕೆಟ್ ದಿಗ್ಗಜ ವಿವಿಯನ್ ರಿಚರ್ಡ್ಸ್ ಐಪಿಎಲ್ ಕ್ರಿಕೆಟ್ಟನ್ನು 'ಕೌಶಲಗಳ ಸ್ಥಿತ್ಯಂತರದ ಪ್ರಯೋಗಶಾಲೆ' ಎಂದು ಬಣ್ಣಿಸಿದರು. ಅದಕ್ಕೆ ಅವರು ಜ್ವಲಂತ ಉದಾಹರಣೆಗಳನ್ನೂ ನೀಡಿದರು. ಟೆಸ್ಟ್, ಏಕದಿನ ಕ್ರಿಕೆಟ್ ಪಂದ್ಯಗಳಲ್ಲಿ ವಿಂಡೀಸರು ತಲೆಎತ್ತುವಂತೆ ಆಡಿರುವ ಕ್ರಿಸ್ ಗೇಲ್, ಚುಟುಕು ಕ್ರಿಕೆಟ್‌ನಲ್ಲೂ ಕಣ್ಮಣಿಯಾದ್ದನ್ನು ಕಂಡಿದ್ದೇವೆ. ತಾಳ್ಮೆಯ ಮೂರ್ತಿಯಂತೆ ಕಾಣುತ್ತಲೇ ಸ್ಪಿನ್ನರ್‌ಗಳು ತಡಕಿ ನೋಡಿಕೊಳ್ಳುವಂತೆ ಆಡುತ್ತಿದ್ದ ಮಾಹೇಲ ಜಯವರ್ಧನೆ ಇವತ್ತು ಮುಂಬೈ ಇಂಡಿಯನ್ಸ್ ತಂಡ ಐದನೇ ಸಲ ಐಪಿಎಲ್ ಕಪ್ ಎತ್ತಿಹಿಡಿಯುವಂಥ ಪಾಠ ಹೇಳಿದ್ದಾರೆ. ಅನಿಲ್ ಕುಂಬ್ಳೆ ಕಿಂಗ್ಸ್ ಇಲೆವೆನ್ ಪಂಜಾಬ್ ತಂಡದ ಕೋಚ್ ಆಗಿ, ರವಿ ಬಿಷ್ಣೋಯ್ ಅವರಂಥ ಯುವ ಸ್ಪಿನ್ ಪ್ರತಿಭೆಗೆ ನೀರು–ಗೊಬ್ಬರ ಹಾಕುತ್ತಾರೆ. ಪಿಚ್‌ನ ನಿರ್ದಿಷ್ಟ ಜಾಗದಲ್ಲಿ ಒಂದು ಪ್ಲಾಸ್ಟಿಕ್ ವಸ್ತುವನ್ನು ಇಟ್ಟು, 'ಅದರ ಮೇಲೆ ಆರು ಎಸೆತಗಳಲ್ಲಿ ಎಷ್ಟನ್ನು ಹಾಕಬಲ್ಲೆ' ಎಂದು ರಾಜಸ್ಥಾನ್ ರಾಯಲ್ಸ್ ತಂಡದ ರಾಹುಲ್ ತೇವಾಟಿಯಾಗೆ ಆಸ್ಟ್ರೇಲಿಯಾದ ಸ್ಪಿನ್ ದಿಗ್ಗಜ ಶೇನ್ ವಾರ್ನ್ ಸವಾಲು ಹಾಕುತ್ತಾರೆ. ಅಷ್ಟೇ ಅಲ್ಲ, ಅವರೂ ಆರು ಎಸೆತಗಳನ್ನು ಹಾಕಿ, ಆ ಪ್ಲಾಸ್ಟಿಕ್‌ಗೆ ಗುರಿ ಮಾಡಲು ಯತ್ನಿಸಿ ಸೋಲುತ್ತಾರೆ. ಸೋತು, ಶಿಷ್ಯನನ್ನು ಗೆಲ್ಲಿಸುತ್ತಾರೆ. ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ದಾಳಿಕೋರ ನಾಯಕ ರಿಕಿ ಪಾಂಟಿಂಗ್ ಡೆಲ್ಲಿ ಡೇರ್ ಡೆವಿಲ್ಸ್ ತಂಡದ ಡ್ರೆಸಿಂಗ್ ರೂಮ್‌ನಲ್ಲಿ ನಿಂತು, ಆಯಾ ಪಂದ್ಯ ಮುಗಿದ ಮೇಲೆ ತಲಸ್ಪರ್ಶಿ ವಿಮರ್ಶೆ ಮಾಡಿದ್ದಾರೆ. ಇಷ್ಟಪಟ್ಟ ಆಟಗಾರರಿಗೆ ಪುಟ್ಟದೊಂದು ಉಡುಗೊರೆ ನೀಡಿ, 'ಶಹಬ್ಬಾಸ್' ಎಂದಿದ್ದಕ್ಕೇ ಅಲ್ಲವೇ ಆ ತಂಡದವರು ಈ ಸಲ ಐಪಿಎಲ್‌ನಲ್ಲಿ ಫೈನಲ್‌ವರೆಗೆ ಬಂದದ್ದು?

ಐಪಿಎಲ್ ಈ ಎಲ್ಲಾ ಕಾರಣದಿಂದ ಹೊಸ ಚಿಗುರು, ಹಳೆ ಬೇರು ಕೂಡಿದ ಸೊಬಗಿನ ಮರ. ಅಲ್ಲಿ ಮನರಂಜನೆ ಇದೆ. ಹೊಡಿ–ಬಡಿ ಆಟವಿದೆ. ಜತೆಗೆ ಬೌಲರ್‌ಗಳ ಬೆವರ ಹನಿಗೂ ಅರ್ಥ ಸಿಕ್ಕುತ್ತಿದೆ. ಬ್ಯಾಟರ್‌ಗಳ ಆಟ ಎಂದು ಹಲುಬುತ್ತಿದ್ದ ಅನೇಕರಿಗೆ ಟ್ರೆಂಟ್ ಬೌಲ್ಟ್, ಜಸ್ಪ್ರೀತ್ ಬೂಮ್ರಾ, ಜೋಫ್ರಾ ಆರ್ಚರ್, ಕಗಿಸೊ ರಬಾಡಾ, ಮಾರ್ಕಸ್ ಸ್ಟಾಯಿನಿಸ್, ಮಹಮದ್ ಸಿರಾಜ್, ಸಂದೀಪ್ ಶರ್ಮ, ನವದೀಪ್ ಸೈನಿ ವೇಗದ ಬೌಲಿಂಗ್ ಕರಾಮತ್ತು ನೋಡಲು ಸಿಕ್ಕಿತು. ಯಜುವೇಂದ್ರ ಚಹಲ್, ರಶೀದ್ ಖಾನ್, ರವಿ ಬಿಷ್ಣೋಯ್, ವಾಷಿಂಗ್ಟನ್ ಸುಂದರ್, ಮುರುಗನ್ ಅಶ್ವಿನ್, ಕೃನಾಲ್ ಪಾಂಡ್ಯ ತರಹದ ಸ್ಪಿನ್ನರ್‌ಗಳ ಹೊಸತನದ ಶೋಧಗಳಿಗೂ ಉದಾಹರಣೆಗಳು ಕಾಣಿಸಿದವು. ಬೆನ್ ಸ್ಟೋಕ್ಸ್ ಯಾಕೆ ವಿಶ್ವದ ಶ್ರೇಷ್ಠ ಆಲ್‌ರೌಂಡರ್ ಎನ್ನುವುದರ ಪ್ರಾತ್ಯಕ್ಷಿಕೆಗೆ ಅವರ ಎರಡು ಮೂರು ಇನಿಂಗ್ಸ್‌ಗಳ ಸ್ಟ್ರೈಕ್ ರೇಟ್ ಕನ್ನಡಿ ಹಿಡಿಯಿತು.

ಐಪಿಎಲ್ ಎನ್ನುವುದು ಆಟಗಾರರ ಆಸಕ್ತಿಕರ 'ಥಾಲಿ'. ಶಿಥಿಲಗೊಂಡ




ಅಮೂಲ್ಯ ಆಭರಣಗಳು
ಅನನ್ಯ ಆತ್ಮವಿಶ್ವಾಸ ನೀಡುತ್ತದೆ!
ಅದನ್ನು ನಿಮ್ಮದಾಗಿಸಿ
ಮುಳಿಯ ಜುವೆಲ್ಸ್ ನಲ್ಲಿ

ಮುಳಿಯ®
ಮುಳಿಯ ಕೇಶವ ಭಟ್ಟ & ಸನ್ಸ್
ಚಿನ್ನ • ಬೆಳ್ಳಿ • ವಜ್ರ

ಶುದ್ಧತೆಯನ್ನು ಮೀರಿದ ಪರಿಪೂರ್ಣತೆಯೆಡೆಗೆ

ಮಣಿಪಾಲ್ ಸೆಂಟರ್
ಡಿಕೆನ್ಸನ್ ರಸ್ತೆ, ಬೆಂಗಳೂರು

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 9844692916

ಪುತ್ತೂರು | ಬೆಳ್ತಂಗಡಿ | ಮಡಿಕೇರಿ | ಗೋಣಿಕೊಪ್ಪಲ್ | ಬೆಂಗಳೂರು